# 2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **S.C. No.** 241/2023

**ಸಾಕ್ಷಿಯನ್ನು ದಿನಾಂಕ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜ್ಯೋತಿ | ಪಿ.ಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | : | ನಾಗಭೂಷಣರಾಧ್ಯ | ಸಿ.ಡಬ್ಲ್ಯೂ-12 |
| ವಯಸ್ಸು | : | 32 | |
| ಉದ್ಯೋಗ | : | ಬ್ಯುಟಿಕ್ ಉದ್ಯೋಗ | |
| ವಾಸ ಸ್ಥಳ | : | ವರುಣ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 1 ಮತ್ತು 7 ನನ್ನ ತಂದೆ ತಾಯಿ ಇರುತ್ತಾರೆ. ಚಾಸ 13 ನನ್ನ ಗಂಡ. ಚಾಸ 14 ಮತ್ತು 15 ನನ್ನ ತಂಗಿ ಮತ್ತು ಅವಳ ಗಂಡ ಇರುತ್ತಾರೆ. ಮೃತ ಪಲ್ಲವಿ ನನ್ನ ಕೊನೆ ತಂಗಿ ಇರುತ್ತಾಳೆ. ಚಾಸ 18, 19 ನನ್ನ ಮಾವಂದಿರಿದ್ದು, ಚಾಸ 20 ನನ್ನ ಮಾವನ ಮಗನಿರುತ್ತಾನೆ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂಗಿ ಪಲ್ಲವಿಯ ಗಂಡನಿರುತ್ತಾನೆ. ದಿನಾಂಕ 14.6.2023 ರಂದು ನನ್ನ ಪಲ್ಲವಿ ಮರಣ ಹೊಂದಿರುತ್ತಾಳೆ. ಆ ಕಾಲಕ್ಕೆ ಪಲ್ಲವಿಯ ಮದುವೆಯಾಗಿ 9 ವರ್ಷವಾಗಿತ್ತು. ಆ ಕಾಲಕ್ಕೆ ಅವರ ಮಗನಿಗೆ 6 ವರ್ಷ ವಯಸ್ಸಾಗಿತ್ತು. ಆಗ ಆತ 2 ನೇ ತರಗತಿ ಓದುತ್ತಿದ್ದ.

ಆರೋಪಿ ಮೂಲತಃ ಬೆಂಗಳೂರಿನ ಬೇಗೂರಿನವರು. ಮದುವೆ ಕಾಲಕ್ಕೆ ಆರೋಪಿ ಮೈಸೂರಿನ ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದ. ಮದುವೆ ಬಳಿಕ 1-2 ವರ್ಷ ಆರೋಪಿ ಮತ್ತು ನನ್ನ ತಂಗಿ ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದರು. ಆನಂತರ ಅವರು ಬೇರೆ ಮನೆಯಲ್ಲಿ ವಾಸವಿದ್ದರು. ಆಗ ನನ್ನ ತಂಗಿ ಗರ್ಭಿಣಿಯಾಗಿದ್ದಳು. ಆಗ 5 ತಿಂಗಳ ಗರ್ಭಿಣಿಯಾದ ಅವಳನ್ನು ನನ್ನ ತಾಯಿ ಮನೆಗೆ ಕರೆದುಕೊಂಡು ಬಂದಿದ್ದರು. ಅದಕ್ಕೂ ಮೊದಲು ಸಹ ನನ್ನ ತಂಗಿ ನನ್ನ ತಾಯಿ ಮನೆಗೆ ಬಂದು ಹೋಗುವುದನ್ನು ಮಾಡುತ್ತಿದ್ದರು. ನನ್ನ ತಂಗಿಗೆ ಮಗು ಜನಿಸಿ ವರ್ಷದವರೆಗೆ ನನ್ನ ತಂಗಿ ನನ್ನ ತಾಯಿ ಮನೆಯಲ್ಲಿದ್ದಳು. ನಂತರ ಆರೋಪಿಯು ವರುಣದಲ್ಲಿ ಸೈಟ್ ತೆಗೆದುಕೊಂಡು ಮನೆ ಕಟ್ಟಲು ಪ್ರಾರಂಭಿಸಿದ. ಆ ಕಾಲಕ್ಕೆ ಆರೋಪಿ ಮನೆ ಕಟ್ಟಲು 8 ಲಕ್ಷ ರೂ. ಸಾಲ ಮಾಡಿದ್ದ. ಮನೆ ಕಟ್ಟುವಾಗ ಆರೋಪಿಯ ತಾಯಿ ಮರಣ ಹೊಂದಿರುತ್ತಾರೆ. ಆ ಕಾಲಕ್ಕೆ ಮನೆ ಪೂರ್ಣಗೊಳ್ಳುವ ಮೊದಲೇ ಆರೋಪಿ ಜಗಳ ಮಾಡಿಕೊಂಡು 2-3 ಎಲ್ಲಿಗೋ ಹೋಗಿದ್ದ. ಆಗ ನನ್ನ ತಾಯಿಯ ಮನೆಯವರು ಆ ಮನೆಯನ್ನು ಪೂರ್ಣಗೊಳಿಸಿದರು. ಅದೇ ಮನೆಯಲ್ಲಿ ನನ್ನ ತಂಗಿ, ಅವಳ ಮಗ ಹಾಗೂ ನನ್ನ ಅಜ್ಜ ಅಜ್ಜಿ ವಾಸವಿದ್ದರು. ನಂತರ ನನ್ನ ತಾಯಿ ಮನೆಯ ಸಾಲ ತೀರಿಸಿದರು. ನಂತರ ನನ್ನ ಮಾವನ ಮಗಳ ಮದುವೆ ನಿಶ್ಚಯವಾದಾಗ ಆರೋಪಿ ವಾಪಸ್ ಬಂದಿದ್ದ. ಆಗ ಆರೋಪಿ ನನ್ನ ಮಾವಂದಿರ ಬಳಿ ಮುಂದೆ ನನ್ನ ಹೆಂಡತಿಯನ್ನು ಚನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿ ಕೆ.ಎಸ್.ಆರ್.ಟಿ.ಸಿ

ಬಡಾವಣೆಗೆ ಕರೆದುಕೊಂಡು ಹೋದ. ಆ ಮನೆಯನ್ನು ನನ್ನ ಮಾವ ಚನ್ನವೀರಣ್ಣ ಆರಾಧ್ಯ ಇವರು ಬಾಡಿಗೆಗೆ ಕೊಡಿಸಿದರು. ಆ ಕಾಲಕ್ಕೆ ಆರೋಪಿಯೇ ನಾವು ಸ್ವಂತ ಮನೆಯಲ್ಲಿರುವುದಿಲ್ಲ, ಬಾಡಿಗೆ ಮನೆಯಲ್ಲಿರುವುದಾಗಿ ಹೇಳಿ ಅಲ್ಲಿಗೆ ಹೋಗಿದ್ದ. ನನ್ನ ತಂಗಿ ಯಾರೊಂದಿಗೆ ಮಾತನಾಡಿದರೆ ಸಹ ಆರೋಪಿ ಅನುಮಾನಪಡುತ್ತಿದ್ದ ಮತ್ತು ನನ್ನ ತಾಯಿಯೇ ಅವರ ಮನೆಯ ಖರ್ಚು ವೆಚ್ಚ ನೋಡಿಕೊಳ್ಳುತ್ತಿದ್ದರು. ನನ್ನ ತಂಗಿ ಟೈಲರಿಂಗ್ ಕೆಲಸ ಮಾಡುತ್ತಿದ್ದಳು. ಒಂದು ಬಾರಿ ನನ್ನ ತಂಗಿ ಚಾಮುಂಡಿ ಬೆಟ್ಟದ ಬಳಿ ಟೈಲರಿಂಗ್ ಕೆಲಸ ಮಾಡುವಾಗ ನಾನು ನನ್ನ ಗಂಡನಿಗೆ ಅದೇ ರೂಟಿನಲ್ಲಿ ಬರುವುದರಿಂದ ನಮ್ಮ ಮನೆಗೆ ಕರೆದುಕೊಂಡು ಬರಲು ಹೇಳಿದ್ದೆ. ಆಗ ನನ್ನ ಗಂಡ ಅವಳನ್ನು ತನ್ನ ಬೈಕಿನಲ್ಲಿ ಕೂರಿಸಿಕೊಂಡು ನಮ್ಮ ಮನೆಗೆ ಬಂದಿದ್ದ. ಆ ಕಾಲಕ್ಕೆ ಆರೋಪಿ ನನ್ನ ಹೆಂಡತಿಯನ್ನು ನೀನು ಏಕೆ ಕರೆದುಕೊಂಡು ಬಂದೆ ಎಂದು ಜಗಳ ಮಾಡಿದ. ನನ್ನ ತಂಗಿ ತನ್ನ ಬಳಿ ಬಸ್‌ಗೂ ಸಹ ಹಣ ಇಲ್ಲ ಎಂದು ಹೇಳಿಕೊಳ್ಳುತ್ತಿದ್ದಳು. ವರುಣ ಗ್ರಾಮದಲ್ಲಿದ್ದಾಗ ನಾವು ನಮ್ಮ ತಂಗಿಗೆ ಒಟ್ಟ ಬಟ್ಟೆ ಅಂಗಡಿ ಮಾಡಿಕೊಟ್ಟಿದ್ದೆವು. ಆ ಕಾಲಕ್ಕೆ ಗ್ರಾಹಕರು ಅಂಗಡಿಗೆ ಬಂದಾಗಲೂ ಸಹ ಆರೋಪಿ ನನ್ನ ತಂಗಿ ಜೊತೆ ಜಗಳ ಮಾಡುತ್ತಿದ್ದ.

ದಿನಾಂಕ 14.6.2023 ರಂದು ಬೆಳಿಗ್ಗೆ ಆರೋಪಿಯು ನನ್ನ ಮಾವನಿಗೆ ಫೋನ್ ಮಾಡಿ ಪಲ್ಲವಿಯನ್ನು ಕೊಲೆ ಮಾಡಿರುವುದಾಗಿ ಹೇಳಿರುತ್ತಾನೆ. ನಂತರ

ನನ್ನ ಮಾವ ಮತ್ತು ಅವರ ಮಗಳು ನನ್ನ ಗಂಡ ಹಾಗೂ ನನಗೆ ಫೋನ್ ಮಾಡಿ ವಿಷಯ ತಿಳಿಸಿದರು. ಆಗ ನಾನು ನನ್ನ ತಾಯಿಗೆ ಅವರು ವಾಸವಿದ್ದ ಕೆಳಗಿನ ಮನೆಗೆ ವಿಷಯ ತಿಳಿಸಿದೆ. ನಾನು ಹೋಗುವ ಮೊದಲೇ ಅವರಿಗೂ ಸಹ ಆ ವಿಷಯ ಗೊತ್ತಾಗಿತ್ತು. ನಂತರ ನನ್ನ ತಾಯಿ, ತಂದೆ, ತಾತ, ನನ್ನ ಗಂಡ, ನನ್ನ ಮೈದುನ ಎಲ್ಲರೂ ಪಲ್ಲವಿ ವಾಸವಿದ್ದ ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಮನೆಗೆ ಹೋದರು. ನಂತರ ಅವರು ಪಲ್ಲವಿ ಸತ್ತು ಹೋಗಿದ್ದಾಳೆ ಎಂದು ನನಗೆ ತಿಳಿಸಿದರು. ಆ ಕಾಲಕ್ಕೆ ಅವರನ್ನು ನೋಡಿ ಅರೋಪಿ ತನ್ನ ಮಗನನ್ನು ಅಲ್ಲಿಯೇ ಬಿಟ್ಟು ಓಡಿ ಹೋದ ಎಂದು ಹೇಳಿದರು. ಈ ಎಲ್ಲ ವಿಷಯದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು